# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 394 (440) |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್, (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಐ.ಎಂ.ಎ. ಹಗರಣದಲ್ಲಿ ಭಾಗಿಯಾದ ಕೆಳಗಿನ ಹಂತದ ಅಧಿಕಾರಿಗಳನ್ನು ಅಮಾನತ್ತು ಮಾಡಿರುವ ಸರ್ಕಾರ ಅದೇ ರೀತಿಯ ಆರೋಪ ಹೊತ್ತಿರುವ ಮತ್ತು ಈ ಹಗರಣಕ್ಕೆ ಪ್ರಮುಖ ಬೆಂಗಲಿಗರಾದ ಐಪಿಎಸ್ ಅಧಿಕಾರಿಗಳನ್ನು ಅಮಾನತ್ತುಗೊಳಿಸದಿರಲು ಕಾರಣವೇನು; ಇದರಿಂದಾಗಿ ತನಿಖೆಯಲ್ಲಾಗುವ ವಿಳಂಬ/ ಅವ್ಯವಹಾರಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು; (ವಿವರ ನೀಡುವುದು) | ಪ್ರಕರಣದ ತನಿಖೆಯನ್ನು ಸಿಬಿಐ ಸಂಸ್ಥೆಗೆ ವಹಿಸಲಾಗಿತ್ತು. ತನಿಖಾ ಸಂಸ್ಥೆಯ ಶಿಫಾರಸ್ಸಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. |
| ಆ) | ಭ್ರಷ್ಟಾಚಾರ ಎಸಗಿದ ಈ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಗೊಳಿಸುವ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ಪತ್ರ ಬರೆಯಲಾಗುವುದು; ಈ ಭ್ರಷ್ಟ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಗೊಳಿಸುವ ಕುರಿತು ಸರ್ಕಾರದ ನಿಲುವೇನು; | ಇಲ್ಲ.<br><br>ಇಲಾಖಾ ವಿಚಾರಣೆ ಮತ್ತು ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಇರುತ್ತವೆ. ಈ ವಿಚಾರಣೆಗಳಲ್ಲಿ ಬರುವ ಅಂತಿಮ ಆದೇಶದ ನಂತರ ಕ್ರಮ ಕೈಗೊಳ್ಳಬೇಕಾಗುತ್ತದೆ. |
| ಇ) | ಕಳೆದ 3 ವರ್ಷಗಳಲ್ಲಿ ಐ.ಎಂ.ಎ ಹಗರಣದಲ್ಲಿ ಆರೋಪಿತರಾದ ಐ.ಪಿ.ಎಸ್ ಅಧಿಕಾರಿಗಳಿಗೆ ಇಲಾಖಾ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಎಷ್ಟು ನೋಟೀಸ್ ನೀಡಲಾಗಿದೆ; ಐಪಿಎಸ್ ಅಧಿಕಾರಿಗಳು ಯಾವ ಯಾವ ದಿನಾಂಕದಂದು ಇಲಾಖಾ ವಿಚಾರಣೆಗೆ | ಸದರಿ ಪ್ರಕರಣದಲ್ಲಿ ಆರೋಪಿತರಾದ ಇಬ್ಬರು ಐಪಿಎಸ್ ಅಧಿಕಾರಿಗಳ ಪೈಕಿ ಶ್ರೀ ಅಜಯ್ ಹಿಲೋರಿ, ಐಪಿಎಸ್ ಇವರ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ ವಿಚಾರಣಾಧಿಕಾರಿ- ಯವರು ಸಲ್ಲಿಸಿದ್ದ ತನಿಖಾ ವರದಿಯನ್ನು ಸರ್ಕಾರವು |

| | | |
|---|---|---|
| | ಹಾಜರಾಗಿ ತಮ್ಮ ವಿವರಣೆಯನ್ನು ನೀಡಿದ್ದಾರೆ? (ವಿವರ ನೀಡುವುದು) | ಒಪ್ಪಿರುವುದಿಲ್ಲ. ನಿವೃತ್ತ ಜಿಲ್ಲಾ ನ್ಯಾಯಾಧೀಶರ ಮೂಲಕ ಮತ್ತೊಮ್ಮೆ ವಿಚಾರಣೆಯನ್ನು ನಡೆಸಲು ಆದೇಶ ಹೊರಡಿಸಲಾಗಿದೆ. ಈ ಆದೇಶದ ವಿರುದ್ಧ ಕೇಂದ್ರಿಯ ಆಡಳಿತ ನ್ಯಾಯಮಂಡಳಿ ತಡೆಯಾಜ್ಞೆ ನೀಡಿರುತ್ತದೆ.<br><br>ಶ್ರೀ ಹೇಮಂತ್ ನಿಂಬಾಳ್ಕರ್, ಐಪಿಎಸ್ ಇವರ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿದ್ದು, ದಿನಾಂಕ: 19.12.2022, 12.01.2023, 19.01.2023 ಮತ್ತು 30.01.2023 ರಂದು ವಿಚಾರಣೆಯನ್ನು ನಡೆಸಲಾಗಿದೆ. ಎಲ್ಲಾ ದಿನಾಂಕಗಳಂದು ಅಧಿಕಾರಿಯವರು ಹಾಜರಾಗಿರುತ್ತಾರೆ. |

ಸಂಖ್ಯೆ: ಇ-ಸಿಆಸುಇ 46 ಎಸ್‌ಪಿಎಸ್ 2023

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**